ದಿನಾಂಕ 5-06-2018 ರ ಮಂಗಳವಾರ ಬೆಳಗ್ಗೆ 11-00 ಗಂಟೆಗೆ ಸೆಸ್ಕ್, ಪಾಂಡವಪುರ ಉಪವಿಭಾಗ ಕಛೇರಿಯ ಆವರಣದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

<u>ಹಾಜರಿದ್ದ ಅಧಿಕಾರಿಗಳು / ನೌಕರರು</u>
<u>ಶ್ರೀಯುತ:</u>

1. ಎಸ್. ಶ್ರೀನಿವಾಸಮೂರ್ತಿ : ಅಇಂ(ವಿ),ಮಂಡ್ಯ ವೃತ್ತ.
2. ಮುಜ್ಹಾಮಿಲ್ ಖಾನ್ : ಕಾನಿಇಂ(ವಿ), ಪಾಂಡವಪುರ ವಿಭಾಗ.
3. ಎಂ.ಪ್ರಕಾಶ್ : ಲೆಕ್ಕಾಧಿಕಾರಿ. ಪಾಂಡವಪುರ ವಿಭಾಗ.
4. ಮಹದೇವಪ್ಪ : ಲೆಕ್ಕಾಧಿಕಾರಿ.(ಆಂ.ಪ) ಪಾಂಡವಪುರ ವಿಭಾಗ.
5. ವಿ. ಪುಟ್ಟಸ್ವಾಮಿ : ಸಕಾನಿಇಂ(ವಿ), ಪಾಂಡವಪುರ ಉಪವಿಭಾಗ.
6. ರೂಪಿಣಿ.ಎಂ.ಎಸ್ : ಸಇಂ(ತಾಂ), ಪಾಂಡವಪುರ ಉಪವಿಭಾಗ.
7. ಹೆಚ್.ಇ. ಮಹದೇವ : ಸಇಂ(ವಿ), ಪಟ್ಟಣ ಶಾಖೆ, ಪಾಂಡವಪುರ ಉಪವಿಭಾಗ.
8. ಪಾಂಡುರಂಗ.ಹೆಚ್.ಸಿ : ಸಇಂ(ವಿ), ಟಿ.ಎಸ್. ಛತ್ರ ಶಾಖೆ.
9. ಸತೀಶ್ : ಸಇಂ(ವಿ), ಮೇಲುಕೋಟೆ ಶಾಖೆ.
10. ಜಿ. ಸುಷ್ಮ : ಕಿಇಂ(ವಿ), ಚಿನಕುರಳಿ ಶಾಖೆ.
11. ಎ.ಬಿ. ಕಿರಣ್ ಕುಮಾರ್ : ಪ್ರಭಾರ ಕಿಇಂ(ವಿ), ಕ್ಯಾತನಹಳ್ಳಿ ಶಾಖೆ.
12. ಬಿ. ನಂದೀಶ್ : ಕಿಇಂ(ವಿ), ಬನ್ನಂಗಾಡಿ ಶಾಖೆ.
13. ಎಲ್. ಕೃಷ್ಣರಂಗರಾಜು : ಕಿಇಂ(ವಿ), ಮಾಣಿಕ್ಯನಹಳ್ಳಿ ಶಾಖೆ.
14. ಎಂ.ಬಿ ಚೆಲುವರಾಜು : ಪ್ರಭಾರ ಕಿಇಂ(ವಿ), ಮೇಲುಕೋಟೆ ಶಾಖೆ.
15. ಚೇತನ್.ಜೆ : ಗು.ಕಿ.ಸ, ಪಾಂಡವಪುರ ಉಪವಿಭಾಗ.
16. ವಿ. ಕುಮಾರ ಸ್ವಾಮಿ : ಗು.ಕಿ.ಸ, ಪಾಂಡವಪುರ ವಿಭಾಗ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ, ಪಾಂಡವಪುರ ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ / ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ವಿದ್ಯುತ್ ಗ್ರಾಹಕರ ಕುಂದುಕೊರತೆಗಳನ್ನು ಆಲಿಸಿ ಬಗೆಹರಿಸುವ ನಿಟ್ಟಿನಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಉಪ ವಿಭಾಗ ಮಟ್ಟದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ವೃತ್ತಕಛೇರಿ ಮಂಡ್ಯ, ರವರ ಅಧ್ಯಕ್ಷತೆಯಲ್ಲಿ ಈ ಜನಸಂಪರ್ಕ ಸಭೆಯನ್ನು ನಡೆಸುವಂತೆ ಕೆ.ಇ.ಆರ್.ಸಿ ರವರು ಆದೇಶಿಸಿರುತ್ತಾರೆ, ವಿದ್ಯುತ್ ಗ್ರಾಹಕರಿಗೆ ಮೂಲಭೂತ ಸೌಕರ್ಯ ಕಲ್ಪಿಸುವ, ಸಮಸ್ಯೆಗಳನ್ನು ನಿವೇದಿಸಿಕೊಳ್ಳುವ ಮತ್ತು ವಿದ್ಯುತ್ ದರ ಪರಿಷ್ಕರಣೆಯ ಸಂಧರ್ಭದಲ್ಲಿ ಈ ಜನಸಂಪರ್ಕ ಸಭೆಯ ಮಾಹಿತಿಯು ಅವಶ್ಯಕತೆಯಾಗಿರುತ್ತದೆ.

ಸದರಿ ಸಭೆಯಲ್ಲಿ ಹಾಜರಿದ್ದ ವಿದ್ಯುತ್ ಗ್ರಾಹಕರು ಮೌಖಿಕವಾಗಿ ಮತ್ತು ಲಿಖಿತವಾಗಿ ತಿಳಿಸಿದ್ದ ವಿದ್ಯುತ್ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸಭೆಯಲ್ಲಿ ತೆಗೆದುಕೊಂಡ / ತೆಗೆದುಕೊಳ್ಳಬೇಕಾದ ತೀರ್ಮಾನಗಳು ಈ ಕೆಳಕಂಡಂತೆ ಇರುತ್ತವೆ.

1. **<u>ಶ್ರೀ ರವಿ.ಟಿ.ಜೆ, ತಿಮ್ಮನಕೊಪ್ಪಲು ಗ್ರಾಮ, ಮೊಬೈಲ್ ನಂ. 9731338788</u>**

<u>ದೂರು:</u> ನನ್ನ ಐ.ಪಿ ಸ್ಥಾವರಕ್ಕೆ ಪರಿವರ್ತಕವನ್ನು ಅಳವಡಿಸಿಕೊಟ್ಟಿರುವುದಿಲ್ಲ, ಈ ಕಾಮಗಾರಿಯ ಅವಾರ್ಡ್ ಸಂಖ್ಯೆ: 38 ಆಗಿರುತ್ತದೆ, ಆದಷ್ಟು ಬೇಗ ಪರಿವರ್ತಕವನ್ನು ಅಳವಡಿಸಿಕೊಟ್ಟು ವೋಲ್ಟೇಜ್ ಸಮಸ್ಯೆಯನ್ನು ಪರಿಹರಿಸಿಕೊಡಬೇಕೆಂದು ಮನವಿಮಾಡಿರುತ್ತಾರೆ.

<u>ಕ್ರಮ:</u> ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಆದಷ್ಟು ಬೇಗೆ ಕಾಮಗಾರಿಯನ್ನು ಪೂರೈಸುವಂತೆ UNIP ಯ TTK agency ರವರಿಗೆ ಕರೆದು ನೋಟಿಸ್ ನೀಡಿ ಕಾಮಗಾರಿ ಪೂರೈಸುವಂತೆ ಸೂಚಿಸಿದರು.

2. **<u>ಶ್ರೀ ಜವರೇಗೌಡ, ಕಣಿವೇಕೊಪ್ಪಲು ಗ್ರಾಮ, ಮೊಬೈಲ್ ನಂ. 9731012082.</u>**

<u>ದೂರು:</u> ನನ್ನ ಐ.ಪಿ ಸ್ಥಾವರಕ್ಕೆ UNIP ಯೋಜನೆ ಅಡಿಯಲ್ಲಿ WA ನೀಡಲಾಗಿದ್ದು ಆದಷ್ಟು ಬೇಗ ಕಾಮಗಾರಿಯನ್ನು ಪೂರೈಸಿರೆಂದು ಕೋರಿದ್ದರು.

<u>ಕ್ರಮ:</u> ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಆದಷ್ಟು ಬೇಗೆ ಕಾಮಗಾರಿಯನ್ನು ಪೂರೈಸುವಂತೆ UNIP ಯ TTK agency ರವರಿಗೆ ಕರೆದು ನೋಟಿಸ್ ನೀಡಿ ಕಾಮಗಾರಿ ಪೂರೈಸುವಂತೆ ಸೂಚಿಸಿದರು.

3. **<u>ಶ್ರೀ ಕುಮಾರ, ಕೋಡಾಲ ಗ್ರಾಮ ಮೊಬೈಲ್ ನಂ. 9731368659.</u>**

<u>ದೂರು:</u> ನಮ್ಮ ಊರಿನ ವ್ಯಾಪ್ತಿಗೆ ಮಹದೇಶ್ವರಪುರ MUSS ನಿಂದ ಬರುವ ಲಕ್ಷ್ಮೀಸಾಗರ NJY feeder ಆಗಾಗ್ಗೆ ಟ್ರಿಪ್ ಆಗುತ್ತಿರುತ್ತದೆ, ಸ್ವಲ್ಪ ಮಳೆಬಂದರೆ ಸಾಕು ಕರೆಂಟ್ ಇರುವುದಿಲ್ಲ ರಾತ್ರಿವೇಳೆ ಕರೆಂಟ್ ಹೋದರೆ ಇನ್ನು ಬೆಳಿಗ್ಗೆಯೇ ಬರುವುದು ಇದನ್ನು ಸರಿಪಡಿಸಿ ನಿರಂತರವಾಗಿ ವಿದ್ಯುತ್ ಪೂರೈಸಿರೆಂದು ಮನವಿಮಾಡಿದ್ದರು.

<u>ಕ್ರಮ:</u> ಮೇಲುಕೋಟೆಯ ಪ್ರಭಾರ ಕಿರಿಯ ಇಂಜಿನಿಯರ್ ರವರಿಗೆ ನಿಮ್ಮ ಶಾಖಾಸಿಬ್ಬಂದಿಯವರನ್ನೆಲ್ಲಾ ಒಂದು ದಿನ ಈ ಭಾಗಕ್ಕೆ ನಿಯೋಜಿಸಿ Jungle cutting ಮಾಡಿಸುವಂತೆ ಸೂಚಿಸಿದರು, ಮಾರ್ಗದೋಷ ಕಂಡುಬಂದ ಕೂಡಲೇ ಕಾರ್ಯ ಪ್ರವೃತ್ತರಾಗಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳಬೇಕೆಂದು ತಿಳಿಸಲಾಯಿತು.

4. **<u>ಶ್ರೀ ಕೆಂಪುಗೌಡ, ಪಾಂಡವಪುರ ತಾಲ್ಲೂಕು ರೈತ ಸಂಘದ ಅಧ್ಯಕ್ಷರು, ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರು, ಅರಳುಕುಪ್ಪೆ ಗ್ರಾಮ, ಮೊಬೈಲ್ ನಂ. 9945203066.</u>**

<u>ದೂರು:</u> ನನ್ನ ಕ್ಷೇತ್ರವ್ಯಾಪ್ತಿಯಾದ ಹರವು , ಅರಳುಕುಪ್ಪೆ ಮತ್ತು ಕಟ್ಟೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮುರಿದುಹೋದ/ ಶಿಥಿಲವಾಗಿರುವ ಕಂಬಗಳಿದ್ದು, ಅವುಗಳನ್ನು ಬದಲಿಸುವಂತೆ ಕೋರಿದರು.

<u>ಕ್ರಮ:</u> ಕ್ಯಾತನಹಳ್ಳಿ ಶಾಖಾಧಿಕಾರಿಯವರಿಗೆ ಈ ವ್ಯಾಪ್ತಿಯಲ್ಲಿನ ಮುರಿದುಹೋದ/ ಶಿಥಿಲಗೊಂಡಿರುವ ಕಂಬಗಳಿಗೆ ಶೀಘ್ರವಾಗಿ ಅಂದಾಜುಪಟ್ಟಿ ತಯಾರಿಸಿ ವಿಭಾಗೀಯಕಛೇರಿಗೆ ಸಲ್ಲಿಸುವುದು ತದನಂತರ ಕಾರ್ಯನಿವಾಹಕ ಇಂಜಿನಿಯರ್ ಪಾಂಡವಪುರರವರು ಕಾರ್ಯಾದೇಶನೀಡಿ ಕಂಬಗಳನ್ನು ಬದಲಿಸಲು ಕ್ರಮಕೈಗೊಳ್ಳಲು ಸೂಚಿಸಿದರು.

**5. ಶ್ರೀ ನಾಗಣ್ಣ, ರಾಗಿಮುದ್ದನಹಳ್ಳಿ ಗ್ರಾಮ, ಮೊಬೈಲ್ ನಂ. 9740225572.**

**ದೂರು:** 1. ರಾಗಿಮುದ್ದನಹಳ್ಳಿ ಕಾಲೋನಿಗೆ ಹಾಲಿ ಇರುವ 25 ಕೆವಿಎ ಪರಿವರ್ತಕದಿಂದ ವೋಲ್ಟೇಜ್ ಸಮಸ್ಯೆ ಉಂಟಾಗಿದ್ದು, ಅದನ್ನು 63 ಕೆವಿಎ ಗೆ ಸಾಮರ್ಥ್ಯ ಹೆಚ್ಚಳವಮಾಡಿಕೊಡಿರೆಂದು ಕೋರಿದರು.

2. ಸೌಭಾಗ್ಯ ಯೋಜನೆಯಡಿಯಲ್ಲಿ ನಮ್ಮ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿನ ಮನೆಗಳಿಗೆ ಹೆಚ್ಚುವರಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವಂತೆ ಕೋರಿದರು.

**ಕ್ರಮ:** ರಾಗಿಮುದ್ದನಹಳ್ಳಿ ಕಾಲೋನಿಯ 25 ಕೆವಿಎ ಪರಿವರ್ತಕವನ್ನು 63 ಕೆವಿಎ ಗೆ ಸಾಮರ್ಥ್ಯ ಹೆಚ್ಚಳಮಾಡಲು ಕ್ರಮಕೈಗೊಳ್ಳಲಾಗಿದೆ, ಕೆಲಸವು ಪ್ರಗತಿಯಲ್ಲಿರುತ್ತದೆಂದು ತಿಳಿಸಲಾಗಿದೆ.

ಸೌಭಾಗ್ಯ ಯೋಜನೆಯಡಿಯಲ್ಲಿ ಬಂದಿರುವ ಅರ್ಜಿಗಳಿಗೆ ಡಿ.ಪಿ.ಆರ್ ಸಿದ್ದಪಡಿಸುತ್ತಿದ್ದು ಆದಷ್ಟು ಬೇಗ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದೆಂದು ತಿಳಿಸಲಾಯಿತು.

**6. ಶ್ರೀ ರವಿಕುಮಾರ್, ಹರಳಹಳ್ಳಿ ಗ್ರಾಮ, ಮೊಬೈಲ್ ನಂ. 9880756263.**

**ದೂರು:** ನನ್ನ ಐ.ಪಿ ಸ್ಥಾವರಕ್ಕೆ UNIP ಯೋಜನೆಯಡಿಯಲ್ಲಿ WA 64 ಆಗಿದ್ದು ಇನ್ನು ಕೆಲಸವಾಗಿರುವುದಿಲ್ಲವೆಂದು, ಆದಷ್ಟು ಬೇಗ ಕೆಲಸ ಮಾಡಿಸಿಕೊಡುವಂತೆ ಕೋರಿದರು.

**ಕ್ರಮ:** ಸಭೆಯಲ್ಲಿದ್ದ ಅಧೀಕ್ಷಕ ಇಂಜನಿಯರ್(ವಿ)ರವರು ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜನಿಯರ್(ವಿ) ರವರಿಗೆ ಆದಷ್ಟು ಬೇಗೆ ಕಾಮಗಾರಿಯನ್ನು ಪೂರೈಸುವಂತೆ UNIP ಯ TTK agency ರವರಿಗೆ ಕರೆದು ನೋಟಿಸ್ ನೀಡಿ ಕಾಮಗಾರಿ ಪೂರೈಸುವಂತೆ ಸೂಚಿಸಿದರು.

**7. ಶ್ರೀ ಬಸವರಾಜು, ಚಿನಕುರಳಿ ಗ್ರಾಮ,ಪಂಚಾಯಿತಿ ಸದಸ್ಯರು, ಮೊಬೈಲ್ ನಂ. 9980029186.**

**ದೂರು:** ಬಿ.ಟಿ ಕೊಪ್ಪಲು ಗ್ರಾಮದ ಕುಡಿಯುವ ನೀರಿನ ಸ್ಥಾವರಕ್ಕೆ ನಿರಂತರ ಜ್ಯೋತಿ ಫೀಡರ್‌ನಿಂದ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯು ಇನ್ನೂ ಪೂರ್ಣಗೊಂಡಿರುವುದಿಲ್ಲ, ಆದಷ್ಟು ಬೇಗ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಕೋರಿದರು.

**ಕ್ರಮ:** ಈ ಸಂಬಂಧ ಚಿನಕುರಳಿ ಶಾಖಾಧಿಕಾರಿಯವರಲ್ಲಿ ವಿಚಾರಿಸಿದಾಗ ಈ ಕಾಮಗಾರಿಗೆ ಭಾಗಶ: ಸಾಮಗ್ರಿಗಳನ್ನು ಪಡೆದಿದ್ದು, ಇನ್ನು 6 ಕಂಬ ಮತ್ತು ಮ್ಯಾಚಿಂಗ್ ಮೆಟೀರಿಯಲ್ಸ್ ಆವಶ್ಯಕತೆಯಿದೆಯೆಂದು ತಿಳಿಸಿದ್ದಕ್ಕೆ ಕಾಸಿಇಂ(ವಿ), ಪಾಂಡವಪುರ ರವರಿಗೆ ಆದಷ್ಟು ಬೇಗ ಉಳಿಕೆ ಸಾಮಗ್ರಿಗಳನ್ನು ವಿತರಿಸಿ ಕಾಮಗಾರಿಯನ್ನು ಪೂರೈಸುವಂತೆ ಸೂಚಿಸಿದರು.

**8. ಶ್ರೀ ನಾಗರಾಜು, ನಾರಾಯಣಪುರಗ್ರಾಮ, ಮೊಬೈಲ್ ನಂ. 9900160053.**

**ದೂರು:** ನಮ್ಮ ಗ್ರಾಮದ ಸುತ್ತಮುತ್ತಲ ಊರುಗಳಾದ ಹುಳಿಗೆರೆ,ಹೊಸಹಳ್ಳಿ, ಮಾರ್ಮಹಳ್ಳಿ ಮತ್ತು ಕಾಮನಾಯಕನಹಳ್ಳಿ ಗ್ರಾಮಗಳಿಗೆ ಸರಿಯಾಗಿ ವಿದ್ಯುತ್ ಸರಬರಾಜು ಆಗುತ್ತಿಲ್ಲ, ಲೈನ್ ಟ್ರಬಲ್ ಬಂದರೆ ಬೇಗನೆ ಸರಿಪಡಿಸುವುದಿಲ್ಲವೆಂದು ಶಾಖಾಧಿಕಾರಿಯವರ ಮೇಲೆ ದೂರಿದರು.

**ಕ್ರಮ:** ಮೇಲುಕೋಟೆಯ ಪ್ರಭಾರ ಕಿರಿಯ ಇಂಜನಿಯರ್ ರವರಿಗೆ ನಿಮ್ಮ ಶಾಖಾಸಿಬ್ಬಂದಿಯವರನ್ನೆಲ್ಲಾ ಒಂದು ದಿನ ಈ ಭಾಗಕ್ಕೆ ನಿಯೋಜಿಸಿ Jungle cutting ಮಾಡಿಸುವಂತೆ ಸೂಚಿಸಿದರು, ಮಾರ್ಗದೋಷ ಕಂಡುಬಂದ ಕೂಡಲೇ ಕಾರ್ಯ ಪ್ರವೃತ್ತರಾಗಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳಬೇಕೆಂದು ತಿಳಿಸಲಾಯಿತು.

**9. ಶ್ರೀ ಗೋವಿಂದೇಗೌಡ, ಗಾಣದ ಹೊಸೂರು ಗ್ರಾಮ. ಮೊಬೈಲ್ ನಂ. 8970309520.**

**ದೂರು:** ನಮ್ಮ ಊರಿನಲ್ಲಿ ಕಂಬವು ಮುರಿದಿದ್ದು ಇನ್ನೂ ಬದಲಿಸಿರುವುದಿಲ್ಲವೆಂದು ದೂರಿದರು.

**ಕ್ರಮ:** ಶಾಖಾಧಿಕಾರಿಯವರಿಗೆ ಅಂದಾಜುಪಟ್ಟಿ ಸಲ್ಲಿಸಿ ಆದಷ್ಟು ಬೇಗ ಕಂಬ ಬದಲಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

**10. ಶ್ರೀ ಹೆಚ್.ವಿ ಸುದೀಪ್, ಹಿರೇಮರಳಿ ಗ್ರಾಮ, ಮೊಬೈಲ್ ನಂ. 9844296979.**

**ದೂರು:** ಸುಮಾರು 4-5 ವರ್ಷಗಳ ಹಿಂದೆ ನಮ್ಮ ಜಮೀನಿನಲ್ಲಿ ವಿದ್ಯುತ್ ಲೈನನ್ನು ಎಳೆದಿರುತ್ತಾರೆ., ನಾನು ಅಲ್ಲಿ ಕೋಳಿ ಫಾರಂಮಾಡಲು ಉದ್ದೇಶಿಸಿರುವುದರಿಂದ ಲೈನನ್ನು ಪಕ್ಕಕ್ಕೆ ಹಾಕಿಕೊಡುವಂತೆ ಕೋರಿದರು.

**ಕ್ರಮ:** ನೀವು ಸ್ವಂತ ಕಾಮಾಗಾರಿ ಯೋಜನೆಯಡಿಯಲ್ಲಿ ಕೆಲಸ ನಿರ್ವಹಿಸಿಕೊಳ್ಳುತ್ತೇನೆಂದು ಅರ್ಜಿ ನೀಡಿದಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಿಕೊಟ್ಟ ಮೇಲೆ, ಅದರ 10% ಶುಲ್ಕವನ್ನು ನಿಗಮಕ್ಕೆ ಭರಿಸಿ, ಅನುಮತಿಪಡೆದ ವಿದ್ಯುತ್ ಗುತ್ತಿಗೆದಾರರ ಮೂಲಕ ಕೆಲಸವಾಡಿಸಿಕೊಳ್ಳಬಹುದೆಂದು ತಿಳಿಸಲಾಗಿದೆ.

ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನಸಂಪರ್ಕ ಸಭೆಯಲ್ಲಿ ಹಾಜರುಪಡಿಸುವಂತೆ ಸೂಚಿಸಲಾಯಿತು.

**:: ಸಭೆಯನ್ನು ಮಧ್ಯಾಹ್ನ 01-30 ಗಂಟೆಗೆ ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು ::**

ಮೆಮೊ ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾಂ)/ಪಾ.ಪುರ/18-19/667-80 ದಿನಾಂಕ:18.06.2018

**ಪ್ರತಿಯನ್ನು ಇವರ ಅವಗಾಹನೆಗೆ ಸಲ್ಲಿಸಲಾಗಿದೆ:**

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ, ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ, ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ.
4. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಿಭಾಗ, ಪಾಂಡವಪುರ.

**ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ:**

1. ಲೆಕ್ಕಾಧಿಕಾರಿ, ಸೆಸ್ಕ್, ಪಾಂಡವಪುರ.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ವಿಭಾಗೀಯ ಕಛೇರಿ, ಪಾಂಡವಪುರ.
3. ಲೆಕ್ಕಾಧಿಕಾರಿ, ಆಂ.ಪ., ಸೆಸ್ಕ್, ಪಾಂಡವಪುರ.

<u>ಪ್ರತಿಯನ್ನು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ:</u>

1. ಶಾಖಾಧಿಕಾರಿ, ಸೆಸ್ಕ್, ಕಾರ್ಯ ಮತ್ತು ಪಾಲನಾ ಶಾಖೆ, ಪಟ್ಟಣ (ಪಾಂಡವಪುರ) / ಟಿ.ಎಸ್. ಛತ್ರ / ಚಿನಕುರಳಿ / ಕ್ಯಾತನಹಳ್ಳಿ / ಬನ್ನಂಗಾಡಿ / ಮೇಲುಕೋಟೆ / ಮಾಣಿಕ್ಯನಹಳ್ಳಿ.

ಸ್ವಂ(ತಾಂ) / ಮುಕ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಪಾಂಡವಪುರ ಉಪವಿಭಾಗ.